ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ (ದಂಡು).

ಆಹಾರ ಧಾನ್ಯಗಳ ಧಾರಣೆಗಳು :—

	ಇದೇ ವಾರಕ್ಕೆ ಹಿಂದಿನ 5 ವರ್ಷಗಳ ಅಂದಾಜಾ.	ಚಾಲ್ತಿ.	
ಅಕ್ಕಿ ರೂಪಾಯಿ 1ಕ್ಕೆ	7	6 ರಿಂದ 6¾ರ ವರಿಗೆ.	ಸೇರುಗಳು.
ರಾಗಿ "	19	14 ರಿಂದ 15ರ ವರಿಗೆ	

ವ್ಯವಸಾಯ ಕೆಲಸಗಳು—ರಾಗಿ, ಜೋಳ, ಅವರೆ, ಇವುಗಳ ಬಿತ್ತನೆ.

ದನಗಳು ಒಳ್ಳೇ ಸ್ಥಿತಿಯಲ್ಲಿವೆ. ನೀರೂ, ಹುಲ್ಲೂ ಸಾಕು.

ಬೆಂಗಳೂರುಪಟ್ಟಣ ಮತ್ತು ತಾಲ್ಲೂಕುಗಳು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸ—ಡಿಸ್ಟ್ರಿಕ್ಟಿನಲ್ಲೆಲ್ಲಾ ಬಿತ್ತನೆ ನಡಿಯುತ್ತಿತ್ತು.

ನಿಂತಿರುವ ಪೈರುಗಳು ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರು—ದೇವನಹಳ್ಳಿ ತಾಲ್ಲೂಕಿನಲ್ಲಿ ಆಲೂಗೆಡ್ಡೆಯನ್ನು ನಡುತ್ತಿದ್ದರು.

10. ಕಾಲದ ಆಯತಿಯು ಸಾಧಾರಣವಾಗಿ ಚೆನ್ನಾಗಿದೆ. ಆಹಾರ ಜಿನಸಿ ಸಾಕಾದಷ್ಟು ಇವೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕೋಲಾರ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸ—ಬಿತ್ತುತ್ತಾ ಇದ್ದಾರೆ.

ನಿಂತಿರುವ ಪೈರುಗಳು—ಚೆನ್ನಾಗಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಶಿಡ್ಲಘಟ್ಟ ಶ್ರೀನಿವಾಸಪುರ, ಇವು ಹೊರ್ತು ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಕಾರ್ತೀಕ ಭತ್ತ; ಕೋಲಾರ, ಮುಳುಬಾಗಲು ವಿನಹ ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ರಾಗಿ ಮತ್ತು ಅವರೆ; ಕೋಲಾರ, ಮುಳುಬಾಗಲು; ಗೋರಿಬಿದನೂರು, ಈ ತಾಲ್ಲೂಕುಗಳು ಮತ್ತು ಗುಡಿಬಂಡೆ ಸಬ್ ತಾಲ್ಲೂಕು, ಇವುಗಳು ಹೊರ್ತು ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ತೊಗರಿ ಮತ್ತು ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿ ಪುನಜಿ ಭತ್ತ.

ಕುಯ್ಯಲಾದ ಪೈರುಗಳು—ಆಗಬಹುದಾದ ಉತ್ಪತ್ತಿ—ಏನೂ ಇಲ್ಲ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸಿ ಸಿಕ್ಕುತ್ತವೆ.

11. ಕೋಲಾರ ತಾಲ್ಲೂಕಿನ ಷಿಲ್ಲಿಂಗೆರೆಯಲ್ಲಿಯೂ ಮತ್ತು ಬೌರಿಂಗ್‌ಪೇಟೆ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿಯೂ ಅಲ್ಲಲ್ಲಿ ಆದ ಕೆಲವು ಪ್ಲೇಗ್ ಕೇಸುಗಳು; ಗೋರೀಬಿದನೂರು ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಕಾಲರಾ; ಬೌರಿಂಗ್‌ಪೇಟೆ ತಾಲ್ಲೂಕಿನ ಘಟ್ಟವಾದಮಂಗಲದಲ್ಲಿ ಶಿಡುಬೂ, ಇವುಗಳು ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ತುಮಕೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ತುಮಕೂರಿನಲ್ಲಿಯೂ ಮತ್ತು ಮದ್ದಗಿರಿಯಲ್ಲಿಯೂ ಉಳುವದು ಮತ್ತು ಬಿತ್ತುವದು.

ಬಿತ್ತನೆಯಾದ ಪೈರುಗಳು—ತುಮಕೂರು, ಮದ್ದಗಿರಿ, ತಿಪಟೂರು, ಕೊರ್ಟಗೆರೆ, ಇವುಗಳಲ್ಲಿ ಭತ್ತ; ತಮಕೂರು, ಮದ್ದಗಿರಿ, ಚಿಕ್ಕನಾಯಕನಹಳ್ಳಿ, ಶೀರ್ಯ, ಪಾವಗಡ, ಕುಣಿಗಲ್ಲು, ತುರುವೇಕೆರೆ, ಇವುಗಳಲ್ಲಿ ರಾಗಿ, ಅವರೆ, ಮತ್ತು ತೊಗರಿ; ತಿಪಟೂರು ಮತ್ತು ಕೊರ್ಟಗೆರೆಯಲ್ಲಿ ರಾಗಿ; ಮದ್ದಗಿರಿ, ಚಿಕ್ಕನಾಯ್ಕನಹಳ್ಳಿ, ತಿಪಟೂರು, ಇವುಗಳಲ್ಲಿ ಕಾಳುಗಳು; ಮದ್ದಗಿರಿ, ಶೀರ್ಯ, ಪಾವಗಡ, ಕುಣಿಗಲ್ಲು, ಕೊರ್ಟಗೆರೆ, ತುರುವೇಕೆರೆ, ಇವುಗಳಲ್ಲಿ ಹರಳು; ಮದ್ದಗಿರಿ ಮತ್ತು ತಿಪಟೂರಿನಲ್ಲಿ ಜೋಳ; ಮದ್ದಗಿರಿಯಲ್ಲಿ ಸಾಮೆ; ಕೊರ್ಟಗೆರೆ ಮತ್ತು ಪಾವಗಡದಲ್ಲಿ ನವಣೆ; ಮದ್ದಗಿರಿ, ಪಾವಗಡ, ಕುಣಿಗಲ್ಲು, ಇವುಗಳಲ್ಲಿ ಹಾರಕ; ಕುಣಿಗಲಿನಲ್ಲಿ ಕಬ್ಬು ಮತ್ತು ಬರಗು.

ಕುಯ್ಯಲಾದ ಪೈರುಗಳು—ತುಮಕೂರು, ಗುಬ್ಬಿ, ತಿಪಟೂರು, ಕುಣಿಗಲ್ಲು, ತುರುವೇಕೆರೆ, ಇವುಗಳಲ್ಲಿ ಭತ್ತ, ಮತ್ತು ಕುಣಿಗಲ್ಲಿನಲ್ಲಿ ಕಬ್ಬು.

10. ಕಾಲದ ಆಯತಿಯು ಚೆನ್ನಾಗಿದೆ. ಆದರೆ, ಮದ್ದಗಿರಿ, ಶೀರ್ಯ, ಇವುಗಳ ಕೆಲವು ಭಾಗಗಳಲ್ಲಿಯೂ ಮತ್ತು ಮುಖ್ಯವಾಗಿ ನಿಂತಿರುವ ಪೈರುಗಳಿಗೆ ತಿಪಟೂರಿನಲ್ಲಿಯೂ, ಮಳೆಯು ಹೆಚ್ಚಾಗಿ ಬೇಕಾಗಿದೆ.

11. ಜನಾರೋಗ್ಯ ಚೆನ್ನಾಗಿದೆ. ಆದರೆ, ಪಾವಗಡ ತಾಲ್ಲೂಕಿನ ಗುಮ್ಮಘಟ್ಟ ಮಾಜರದ ಅಕ್ಕಮ್ಮನಹಳ್ಳಿ ಮತ್ತು ಕಣಿವೇಹಳ್ಳಿ, ಈ ಎರಡು ಗ್ರಾಮಗಳಲ್ಲಿಯೂ ಕಾಲರಾ ಪುರೂ ಆಗಿ ಇದೆ.

12. ನೀರೂ, ಹುಲ್ಲೂ ಸಿಕ್ಕುತ್ತವೆ.

733

163

ಮೈಸೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಹೆಗ್ಗಡದೇವನಕೋಟೆ, ಗುಂಡ್ಲುಪೇಟೆ, ಮಳವಳ್ಳಿ, ನಂಜನಗೂಡು, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಭೂಮಿಯನ್ನೂ ಉತ್ತು, ಸಾಗುವಳಿಗೆ ತಯಾರ್ ಮಾಡುತ್ತಾ ಇದ್ದಾರೆ. ಶ್ರೀರಂಗಪಟ್ಣ, ಎಡತೊರೆ, ನಂಜನಗೂಡು, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಭತ್ತದ ಸಸಿಯನ್ನು ಕಿತ್ತು ನಾಟುತ್ತಿದ್ದಾರೆ.

ನಿಂತಿರುವ ಪೈರುಗಳು—ಮೈಸೂರು, ಎಡತೊರೆ, ಈ ಎರಡು ತಾಲ್ಲೂಕುಗಳು ಹೊರ್ತು, ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಚೆನ್ನಾಗಿವೆಯೆಂದು ರಿಪೋರ್ಟಾಗಿದೆ. ಈ ಎರಡು ತಾಲ್ಲೂಕುಗಳಲ್ಲಿ, ಅವು ಬಾಡಿಹೋಗುತ್ತಿವೆಯೆಂದು ರಿಪೋರ್ಟಾಗಿದೆ. ನಾಗಮಂಗಲದ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಜೋಳವೂ ಕೂಡ ಬಾಡಿ ಬರುತ್ತಾ ಇದೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಮಳವಳ್ಳಿಯ ಕೆಲವು ಭಾಗಗಳಲ್ಲಿ ಭತ್ತ, ರಾಗಿ, ತೊಗರಿ, ಹರಳು, ಅವರೆ ಮತ್ತು ಕೃಷ್ಣರಾಜಪೇಟೆ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಅವರೆ, ಇವುಗಳು ಬಿತ್ತಲ್ಪಡುತ್ತಿವೆ.

ಕುಯ್ಯಲಾದ ಪೈರುಗಳು—ಚಾಮರಾಜನಗರದ ಕೆಲವು ಭಾಗಗಳಲ್ಲಿ ಜೋಳ ಮತ್ತು ಎಳ್ಳು, ಮತ್ತು ಕೃಷ್ಣರಾಜಪೇಟೆ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಎಳ್ಳು, ಇವುಗಳು ಕುಯ್ಯಲ್ಪಡುತ್ತಿವೆ. ಮಳವಳ್ಳಿ ಮತ್ತು ಕೃಷ್ಣರಾಜಪೇಟೆ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಕಬ್ಬನ್ನು ಆಲೆ ಆಡುತ್ತಾ ಇದ್ದಾರೆ.

10. ಕಾಲದ ಆಯತಿಯು ಚೆನ್ನಾಗಿದೆ. ಮೈಸೂರು, ಹುಣಸೂರು, ಎಡತೊರೆ, ಗುಂಡ್ಲುಪೇಟೆ, ಕೃಷ್ಣರಾಜಪೇಟೆ ನಾಗಮಂಗಲ ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ನಿಂತಿರುವ ಪೈರುಗಳಿಗೆ ಮಳೆಯು ಬೇಕಾಗಿದೆಯೆಂದು ರಿಪೋರ್ಟಾಗಿದೆ. ರೈತರಲ್ಲೂ ಮತ್ತು ವರ್ತಕರಲ್ಲೂ ಸಾಕಾದಷ್ಟು ಆಹಾರ ಜಿನಸಿ ಇವೆಯೆಂದು ರಿಪೋರ್ಟಾಗಿದೆ.

11. ಜನಾರೋಗ್ಯವು ಚೆನ್ನಾಗಿದೆ. ಆದರೆ, ಎಡತೊರೆ, ಮತ್ತು ಮಂಡ್ಯ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಕಾಲರಾ, ಮತ್ತು ಮಂಜರಾಬಾದ್ ಊರಿನಲ್ಲಿ ಪ್ಲೇಗು, ಇವು ಇರುತ್ತಿವೆ.

12. ಎಲ್ಲಾ ತಾಲ್ಲೂಕುಗಳಲ್ಲಿಯೂ ದನಗಳು ಆರೋಗ್ಯವಾಗಿವೆ ಎಂದು ರಿಪೋರ್ಟಾಗಿದೆ. ನೀರೂ, ಹುಲ್ಲೂ ಎಲ್ಲಾ ಕಡೆಯಲ್ಲಿಯೂ ಸಿಕ್ಕುತ್ತವೆ.

ಹಾಸನ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಹಾಸನದ ತಾಲ್ಲೂಕಿನಲ್ಲಿ ಕಳೆಯನ್ನು ಕೀಳುತ್ತಿದ್ದಾರೆ. ಮಂಜರಾಬಾದ್, ಚನ್ನರಾಯಪಟ್ಣ, ಹೊಳೇನರಶೀಪುರ, ಈ ತಾಲ್ಲೂಕುಗಳಲ್ಲಿ ಭತ್ತದ ಸಸಿಯನ್ನು ಕಿತ್ತು ನಾಟುತ್ತಿದ್ದಾರೆ.

ನಿಂತಿರುವ ಪೈರುಗಳು—ಯಾವವಂದರೆ, ರಾಗಿ, ಭತ್ತ, ಕಬ್ಬು, ತೊಗರಿ, ಹರಳು, ಅವರೆ, ಹುಚ್ಚೆಳ್ಳು, ಇವುಗಳು ಸಾಧಾರಣವಾಗಿ ಸುಮಾರಾಗಿವೆ. ಚನ್ನರಾಯಪಟ್ಣ ತಾಲ್ಲೂಕಿನಲ್ಲಿಯೂ ಮತ್ತು ಆಲೂರು ಸಬ್ ತಾಲ್ಲೂಕಿನಲ್ಲಿಯೂ ಕುಷ್ಕೀ ಪೈರುಗಳು ಮಳೆಯು ಇಲ್ಲದ ಕಾರಣದಿಂದ ಒಣಗುತ್ತಾ ಇವೆಯೆಂದು ರಿಪೋರ್ಟಾಗಿದೆ.

ಕುಯ್ಯಲಾದ ಪೈರುಗಳು—ಏನೂ ಇಲ್ಲ.

10. ಕಾಲದ ಆಯತಿಯು ಸುಮಾರಾಗಿದೆ. ಡಿಸ್ಟ್ರಿಕ್ಟಿನಲ್ಲಿ ಸಾಧಾರಣವಾಗಿ ಎಲ್ಲಾ ಭಾಗಗಳಲ್ಲಿಯೂ ಮಳೆಯು ಹೆಚ್ಚಾಗಿ ಬೇಕಾಗಿದೆ. ಆಹಾರ ಜಿನಸಿಯ ಸರಬರಾಯಿ ಸಾಕು.

11. ಜನಾರೋಗ್ಯವು ಸಮರ್ಪಕವಾಗಿಲ್ಲ; ಯಾಕಂದರೆ, ಹಾಸನ, ಅರಶೀಕೆರೆ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿಯೂ ಮತ್ತು ಆಲೂರು ಸಬ್ ತಾಲ್ಲೂಕಿನಲ್ಲಿಯೂ ಪ್ಲೇಗು, ಅರಕಲ್‌ಗೂಡು, ಚೆನ್ನರಾಯಪಟ್ಣ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಕಾಲರಾ, ಮಂಜರಾಬಾದ್ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಚಳಿಜ್ವರ, ಇವುಗಳು ಇನ್ನೂ ಇದ್ದುಕೊಂಡು ಇವೆಯೆಂದು ರಿಪೋರ್ಟಾಗಿದೆ.

12. ದನಗಳು ಒಳ್ಳೇ ಸ್ಥಿತಿಯಲ್ಲಿವೆ. ನೀರೂ, ಹುಲ್ಲೂ, ಮೇವೂ, ಸಿಕ್ಕುತ್ತವೆ.

ಶಿವಮೊಗ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ಬಿತ್ತನೆಯಾದ ಪೈರುಗಳು—ಶಿಕಾರಿಪುರ ತಾಲ್ಲೂಕಿನ ಕೆಲವು ಭಾಗಗಳಲ್ಲಿ ರಾಗಿಯನ್ನೂ ಮತ್ತು ಹುರುಳಿಯನ್ನೂ ಬಿತ್ತುತ್ತಾ ಇದ್ದಾರೆ.

ನಿಂತಿರುವ ಪೈರುಗಳು ಯಾವವಂದರೆ, ಭತ್ತ, ರಾಗಿ, ಕಬ್ಬು, ಇವುಗಳು ಎಲ್ಲಾ ತಾಲ್ಲೂಕುಗಳಲ್ಲಿಯೂ ಒಳ್ಳೆ ಸ್ಥಿತಿಯಲ್ಲಿವೆ. ಡಿಸ್ಟ್ರಿಕ್ಟಿನ ಮಲನಾಡು ಪ್ರಾಂತ್ಯಗಳಲ್ಲಿ ಅಡಿಕೆಯ ಫಸಲೂ ಒಳ್ಳೇ ಸ್ಥಿತಿಯಲ್ಲಿದೆ. ಈ ಫಸಲಿಗೆ ಬರತಕ್ಕ "ಕೊಳೇ ರೋಗ" ವನ್ನು ಬಾರದ ಹಾಗೆ ತಪ್ಪಿಸಲು ಮಾಡುವ ಮಾಮೂಲ್ ಏರ್ಪಾಡುಗಳನ್ನು ಬಾಗಾಯತ್ ದಾರ್ರುಗಳು ಮಾಡುತ್ತಾ ಇದ್ದಾರೆಂದು ರಿಪೋರ್ಟಾಗಿದೆ.

10. ಕಾಲದ ಆಯತಿಯು ಸಾಧಾರಣವಾಗಿ ಸುಮಾರಾಗಿದೆ. ಸಾಕಾದಷ್ಟು ಆಹಾರ ಜಿನಸಿ ಸಿಕ್ಕುತ್ತವೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆದರೆ, ಶಿವಮೊಗ್ಗ, ಹೊನ್ನಾಳಿ, ಇವೆರಡು ಹೊರ್ತು ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಶಿಡುಬು ಇರುತ್ತಿದೆ. ಶಿಡುಬು ಇರುವ ಸ್ಥಳಗಳಿಗೆ ಶಿಡುಬು ಹಾಕುವ ಹುದ್ದೇದಾರರುಗಳು ಹೋಗುತ್ತಿದಾರೆಂದೂ, ಮತ್ತು ಅಂಥಾ ಸ್ಥಳಗಳಲ್ಲಿ ಮಕ್ಕಳುಗಳಿಗೆ ಶಿಡುಬು ಹಾಕುವ ಹಾಗೆ ಜನಗಳಿಗೆ ಪ್ರೇರೇಪಿಸುತ್ತಾ ಇದ್ದಾರೆಂದೂ, ರಿಪೋರ್ಟಾಗಿದೆ. ಕುಂಸಿ ಸಬ್ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಪ್ಲೇಗು ಇದ್ದುಕೊಂಡು ಇದೆ.

12. ದನಗಳು ಸಾಧಾರಣವಾಗಿ ಆರೋಗ್ಯವಾಗಿವೆ. ಸೊರಬ, ಸಾಗರ, ನಗರ, ತೀರ್ಥಹಳ್ಳಿ, ಈ ತಾಲ್ಲೂಕುಗಳಲ್ಲಿ ಗೋ ಮಾರೀ ರೋಗವು ಇರುತ್ತಾ ಇದೆ. ನಗರದ ತಾಲ್ಲೂಕಿನಲ್ಲಿ ಕಮ್ಮಿಯಾಗಿದೆ. ಹುಲ್ಲೂ, ನೀರೂ ಸಿಕ್ಕುತ್ತವೆ.

8. ಬಜಾರಿನಲ್ಲಿ ಸರಬರಾಯಿ ಜೆನ್ನಾಗಿದೆ.

9. ವ್ಯವಸಾಯ ಕೆಲಸ—ಕೊಪ್ಪ, ಚಿಕ್ಕಮಗಳೂರು, ಮೂಡಿಗೆರೆ, ಏಡೇಹಳ್ಳಿ, ಕೈಂಗೇರಿ, ಇವುಗಳಲ್ಲಿ ಭತ್ತದ ಸಸಿಯನ್ನು ಕಿತ್ತು ನಾಟುತ್ತಿದ್ದಾರೆ. ನಿಂತಿರುವ ಪೈರುಗಳು—ತರೀಕೆರೆಯಲ್ಲಿ ಕಬ್ಬು, ಕೊಪ್ಪದಲ್ಲಿ ಕಬ್ಬು, ಅಡಿಕೆ, ಕಾಫಿ, ಯಾಲಕ್ಕಿ, ಭತ್ತ; ಚಿಕ್ಕಮಗಳೂರಿನಲ್ಲಿ ಕಬ್ಬು, ಭತ್ತ, ರಾಗಿ, ಜೋಳ ಮತ್ತು ಹುಚ್ಚೆಳ್ಳು; ಕಡೂರಿನಲ್ಲಿ ಉದ್ದು, ಹೆಸರು, ಜೋಳ, ಹುಚ್ಚೆಳ್ಳು, ಕೋಡೇ ಭತ್ತ ಮತ್ತು ಕಬ್ಬು; ಮೂಡಿಗೆರೆಯಲ್ಲಿ ಭತ್ತ ಮತ್ತು ರಾಗಿ; ಏಡೇಹಳ್ಳಿಯಲ್ಲಿ ಕಾಫಿ ಮತ್ತು ಕಬ್ಬು; ಇವುಗಳೆಲ್ಲಾ ಒಳ್ಳೇ ಸ್ಥಿತಿಯಲ್ಲಿವೆ. ಬಿತ್ತನೆಯಾದ ಪೈರುಗಳು—ತರೀಕೆರೆಯಲ್ಲಿ ಭತ್ತ, ರಾಗಿ, ಜೋಳ, ಹರುಳಿ, ಹರಳು; ಕಡೂರಿನಲ್ಲಿ ಭತ್ತ, ರಾಗಿ, ಅವರೆ, ತೊಗರಿ; ಇವುಗಳು ಬಿತ್ತಲ್ಪಡುತ್ತಿವೆ. ಕುಯ್ಯಲಾದ ಪೈರು—ಕಡೂರಿನಲ್ಲಿ ಕಬ್ಬು.

10. ಕಾಲದ ಆಯುತಿಯು ಜೆನ್ನಾಗಿದೆ. ಚಿಕ್ಕಮಗಳೂರು, ತರೀಕೆರೆ, ಕಡೂರು, ಈ ತಾಲ್ಲೂಕುಗಳಲ್ಲಿ ಮಳೆಯು ಬೇಕಾಗಿದೆ.

11. ಜನಾರೋಗ್ಯವು ಸಾಧಾರಣವಾಗಿ ಜೆನ್ನಾಗಿದೆ. ಆದರೆ, ಚಿಕ್ಕಮಗಳೂರಿನಲ್ಲಿಯೂ ಮತ್ತು ಅದರ ಆಜೂಬಾಜೂರ ಗಳಲ್ಲಿಯೂ ಪ್ಲೇಗೂ ಮತ್ತು ಕೊಪ್ಪದಲ್ಲಿ ಶಿಡುಬೂ ಇವು ಇರುತ್ತಾ ಇವೆ.

12. ದನಗಳು ಸಾಧಾರಣವಾಗಿ ಆರೋಗ್ಯವಾಗಿವೆ. ತರೀಕೆರೆ ತಾಲ್ಲೂಕಿನಲ್ಲಿ ಪುನಹಾ ದೊಡ್ಡ ರೋಗವು" ಪ್ರಾರಂಭ ಆಗಿದೆ. "ಕ್ಯಾಟಲ್ ಡಿಸೀಜ್ ಇನ್‌ಸ್ಪೆಕ್ಟರವರಿಗೆ ಈ ವಿಷಯವನ್ನು ತಿಳಿಯಪಡಿಸಿದೆ. ಇದೇ ಜಾಡ್ಯವು ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಕಮ್ಮಿಯಾಗಿ ಬರುತ್ತಿದೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಚಿತ್ರದುರ್ಗ.

8. ಬಜಾರಿನಲ್ಲಿ ಸರಬರಾಯಿ ಜೆನ್ನಾಗಿದೆ.

9. ನಿಂತಿರುವ ಪೈರುಗಳು—ಯಾವವೆಂದರೆ, ನವಣೆ, ಸಜ್ಜೆ, ಹರಳು, ರಾಗಿ, ತೊಗರಿ, ಹರಳ್, ಹುರುಳಿ, ಜೋಳ, ಇವುಗಳು ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ. ಬಿತ್ತನೆಯಾದ ಪೈರುಗಳು—ಹಿರಿಯೂರು, ಹೊಳಲ್ಕೆರೆ, ದೇವನಗೆರೆ, ಈ ತಾಲ್ಲೂಕುಗಳಲ್ಲಿ ತೊಗರಿ, ರಾಗಿ, ಅವರೆ; ಹಿರಿಯೂರು, ಹೊಸದುರ್ಗ, ಮೊಳಕಾಲ್ಮೂರು, ಈ ತಾಲ್ಲೂಕುಗಳಲ್ಲಿ ಹರಳು; ದೇವನಗೆರೆ ಮತ್ತು ಮೊಳಕಾಲ್ಮೂರು ತಾಲ್ಲೂಕುಗಳಲ್ಲಿ ಅರಳೆ.

10. ಕಾಲದ ಆಯುತಿಯು ಜೆನ್ನಾಗಿದೆ. ಆಹಾರ ಜೆನೆಸಿ ಸಿಕ್ಕುತ್ತವೆ.

11. ಜನಾರೋಗ್ಯವು ಜೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಬೆಂಗಳೂರು
1907ನೆಯ ಪರ್ಷದ ಜುಲೈ 30ನೆಯ ತಾರೀಖು.

ಎ. ರಂಗಸ್ವಾಮಿ ಐಯ್ಯಂಗಾರ್,
ರೆವಿನ್ಯೂ ಕಮಿಷನರ್.